

ಎಂದೆಲ್ಲಾ ಗುರುತಿಸಹೊರಟರೆ, ಅದಷ್ಟು ನೇರವೂ ಅಲ್ಲ. ಅದರ ಸಂಕೀರ್ಣತೆ ಸುಲಭಕ್ಕೆ ದಕ್ಕುವುದೂ ಇಲ್ಲ. ಹೆಸರಿಲ್ಲದ, ಮೂರ್ತವಲ್ಲದ ಆ 'ಇರುವಿಕೆ'ಯನ್ನು ನಾನು (ತುಸು ಬಾಲಿಶವೆನಿಸಬಹುದೆಂಬ ಅಳುಕಿಟ್ಟುಕೊಂಡೇ) 'ಬಿಗ್ ಬಾಸ್' ಎಂದು ಕರೆಯುತ್ತಿದ್ದೇನೆ ಅಷ್ಟೇ.

'ಇದು ಮತ್ತೇನಲ್ಲ, ಬಂಡವಾಳಶಾಹಿ ವ್ಯವಸ್ಥೆಯೊಂದು ಇದನ್ನೆಲ್ಲ ನಿಯಂತ್ರಿಸುತ್ತಿರುವುದು' ಎಂದರೆ, ಅದು ಮೇಲು ಮೇಲಣ ಮಾತಾದೀತು. ಈ ಬಂಡವಾಳಶಾಹಿ ಅರ್ಥಿಕ ವ್ಯವಸ್ಥೆಯ ಬಗ್ಗೆ ಶತಮಾನಗಳ ಹಿಂದೆಯೇ ತರಹೇವಾರಿ ಅಧ್ಯಯನ, ಚಿಂತನೆಗಳು ನಡೆದಿವೆ. ಹದಿನೆಂಟನೇ ಶತಮಾನದ ತತ್ವಶಾಸ್ತ್ರಜ್ಞ ಆಡಮ್ ಸ್ಮಿತ್ ಅರುಹಿದ 'ಇನ್‌ವಿಸಿಬಲ್ ಹ್ಯಾಂಡ್' ಎಂಬ ಎಕನಾಮಿಕ್ ಥಿಯರಿಯನ್ನೇ ಈ 'ಬಿಗ್ ಬಾಸ್' ಎನ್ನುವ ಗ್ರಹಿಕೆ ಕೂಡ ಪ್ರತಿಪಾದಿಸುತ್ತದೆ ಎಂದೂ ನಮಗೆ ಅನ್ನಿಸಬಹುದು. ಆದರೆ, ವಾಸ್ತವದಲ್ಲಿ ಎರಡರ ನಡುವೆ ಸಾಕಷ್ಟು ಫರಕಿದೆ. ವ್ಯಕ್ತಿಯೊಬ್ಬ ಏನನ್ನು ಕೊಳ್ಳಬೇಕೆನ್ನುವ ಆಯ್ಕೆಯ ಸ್ವಾತಂತ್ರ್ಯವನ್ನು ಆತನಿಗೇ ನೀಡುವುದು, ಸರಕಾರದ ಮಧ್ಯಸ್ಥಿಕೆಯನ್ನು ದೂರವಿಡುವುದು, ಮುಕ್ತ ಮಾರುಕಟ್ಟೆ ಇತ್ಯಾದಿಗಳ ಮುಖೇನ ಸಂಪತ್ತಿನ ಸೃಷ್ಟಿಯ ಬಗ್ಗೆ ಹೇಳುತ್ತಾನೆ ಸ್ಮಿತ್. ಯಾರೊಬ್ಬನ ವೈಯಕ್ತಿಕ ಇಚ್ಛೆಯಿಲ್ಲದೇ ಎಲ್ಲವೂ ಅದಾಗೇ ಅದು ನಡೆಯುತ್ತದೆ ಎಂಬುದು 'ಕಾಣದ ಕೈ' ಸಿದ್ಧಾಂತದ ಮೂಲ ತತ್ವ. ಆದರೆ, ಬಿಗ್‌ಬಾಸ್‌ಶಾಹಿಯಡಿಯಲ್ಲಿ ಆಯ್ಕೆಯ ಸ್ವಾತಂತ್ರ್ಯ ಇರುವುದು, ಎಲ್ಲವೂ ಅದಾಗೇ ಅದು ನಡೆಯುತ್ತಿದೆ ಎಂಬುದೆಲ್ಲ ಹುಸಿ ಸತ್ಯವಷ್ಟೇ. ಆಡಮ್ ಸ್ಮಿತ್ ತನ್ನ ಸಿದ್ಧಾಂತವನ್ನು ಮಂಡಿಸುವಾಗ, ಮುಂಬರುವ ತಂತ್ರಜ್ಞಾನದ ಅಪಾರ ಸಾಧ್ಯತೆಗಳನ್ನು ಊಹಿಸಿರಲಿಕ್ಕಿಲ್ಲ. ಇಂದು ತಂತ್ರಜ್ಞಾನವನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಂಡಿದೆ ಬಿಗ್ ಬಾಸ್. ಅದರ ಅಡಿಯಲ್ಲಿಯ ಕೊಡು–ಕೊಳ್ಳುವಿಕೆಯ ವ್ಯವಹಾರಕ್ಕೆ ಯಾವುದೇ ಸೀಮಿತ ಚೌಕಟ್ಟಿಲ್ಲ. ಅಲ್ಲಿಯ ಆಯಾಮಗಳು ನಮ್ಮ ಕಲ್ಪನೆಗೂ ಮೀರಿದ್ದಾಗಿವೆ. ನಮ್ಮ ಯೋಚನಾ ಕ್ರಮವನ್ನೇ ತಿರುಚಬಲ್ಲ, ನಮ್ಮ ಜೀವನಶೈಲಿಯನ್ನೇ ಬದಲಾಯಿಸಬಲ್ಲ, ನಮ್ಮ ಪ್ರಮುಖ ನಿರ್ಧಾರಗಳನ್ನೆಲ್ಲ ತಾನೇ ತೆಗೆದುಕೊಳ್ಳುವಷ್ಟು ಶಕ್ತಿಶಾಲಿಯಾಗಿ ಬೆಳೆದಿದೆ ಅದು.

ಇದನ್ನೆಲ್ಲಾ ಗಮನಿಸುತ್ತಿದ್ದರೆ – 'ಈ ಜಗದಲ್ಲಿ ಯಾವುದೋ ಅಗೋಚರ ಶಕ್ತಿಯೊಂದಿದೆ. ಅದು ಎಲ್ಲವನ್ನೂ ನಿಯಂತ್ರಿಸುತ್ತದೆ' ಎಂದು ನಮ್ಮ ಹಿರಿಯರು ಹೇಳುತ್ತಿದ್ದ ಮಾತು, 'ನಡೆವುದು, ನುಡಿವುದು, ಕೊಡುವುದು, ಕೊಂಬುವುದು, ಒಡೆಯನ ಪ್ರೇರಣೆಯೆಂದು ನುಡಿದು ಹಿಗ್ಗುವರ ಸಂಗ' ಎಂದು ದಾಸರು ಹಾಡಿದ್ದು ನೆನಪಾಗುತ್ತದೆ. ಸ್ಪಷ್ಟ ಪಾರಮಾರ್ಥಿಕ ಅರ್ಥದಲ್ಲಿ ಅರುಹಿದ ಆ ನುಡಿಗಳೆಲ್ಲ ಈ ರೂಪದಲ್ಲಿ ಇಂದು ನಮ್ಮೆದುರಿಗೇ ನಿಂತಿರುವುದನ್ನು ಕಂಡು ದಿಗ್ಭ್ರಮೆಯಾಗುತ್ತದೆ. ಈ ಕ್ಷಣಕ್ಕೆ, ನಾನು ಟೈಪಿಸುತ್ತಿರುವ ಈ ಲ್ಯಾಪ್‌ಟಾಪು, ಕುಳಿತಿರುವ ಕುರ್ಚಿ ಇವೆಲ್ಲ ಯಾರದೋ ಬಯಕೆಯ ಭಾಗವಾಗಿ ಖರೀದಿಸಿದ್ದೋ ಅನ್ನಿಸುತ್ತದೆ; ನಾಳೆ ನನ್ನ ಶವಪೆಟ್ಟಿಗೆಯ ಲ್ಯಾಮಿನೇಷನ್ ಯಾವ ಕಂಪನಿಯದಾಗಿರಬೇಕು ಎಂಬುದನ್ನು ಆ ಬಿಗ್ ಬಾಸೇ ನಿರ್ಧರಿಸುತ್ತದೋ ಎಂಬ ಯೋಚನೆಗೆ ತಬ್ಬಿಬ್ಬಾಗುತ್ತೇನೆ. ●